ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ಔಬಾ/ಬಿ14/15923/2017-18

ದಿನಾಂಕ 22 DEC 2018

## : ಸುತ್ತೋಲೆ :

ವಿಷಯ: ಕವಿಪ್ರನಿನಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಕೆಲಸಗಾರರ ಕುಂದು ಕೊರತೆಗಳನ್ನು ನಿವಾರಿಸಲು ಕ್ರಮಕೈಗೊಳ್ಳುವ ಬಗ್ಗೆ.

ಉಲ್ಲೇಖ: ಕರ್ನಾಟಕ ರಾಜ್ಯ ವಿದ್ಯುತ್ ಕಾರ್ಮಿಕರ ಫೆಡರೇಷನ್ ಪದಾಧಿಕಾರಿಗಳೊಂದಿಗೆ ದಿನಾಂಕ: 26.10.2018 ರಂದು ಜರುಗಿನ ಕುಂದು ಕೊರತೆಗಳ ಸಭೆ.

*********

ಕವಿಪ್ರನಿನಿ ವ್ಯಾಪ್ತಿಯಲ್ಲಿನ ವಿವಿಧ ಕಚೇರಿ ಹಾಗೂ ವಿದ್ಯುತ್ ಉಪಕೇಂದ್ರಗಳನ್ನು ನಿರ್ವಹಿಸಲು ವಿವಿಧ ಸೇವೆಗಳನ್ನು ನಿರ್ದಿಷ್ಟ ಕೆಲಸಕ್ಕೆ/ನಿರ್ದಿಷ್ಟ ಅವಧಿಗೆ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಟೆಂಡರ್ ಪ್ರಕ್ರಿಯೆಗೊಳಪಡಿಸಿ ಕನಿಷ್ಠ ವೇತನ ಹಾಗೂ ಇತರೆ ಶಾಸನಬದ್ಧ ಮೊತ್ತಗಳನ್ನು ಪಾವತಿಸುವ ಷರತ್ತಿಗೊಳಪಟ್ಟು ಹೊರಗಿನ ಏಜೆನ್ಸಿಗಳಿಂದ ಪಡೆಯಲಾಗುತ್ತಿರುತ್ತದೆ. ಹೊರಗಿನ ಏಜೆನ್ಸಿ ಮೂಲಕ ಗೊತ್ತುಪಡಿಸಿಕೊಳ್ಳಲಾದ ಕಾರ್ಮಿಕರುಗಳಿಗೆ ಕಾರ್ಮಿಕ ಇಲಾಖೆಯು ಕಾಲಕಾಲಕ್ಕೆ ತಿಳಿಸುವ ಕನಿಷ್ಠ ವೇತನ ಹಾಗೂ ಇದರೊಂದಿಗೆ ಶಾಸನಬದ್ಧ ಪಾವತಿಗಳಾದ ಇ.ಪಿ.ಎಫ್, ಇ.ಎಸ್.ಐ ಮತ್ತು ಇತರೆ ಸೌಲಭ್ಯಗಳನ್ನು ಪಾವತಿಸುವುದು ಕಡ್ಡಾಯವಾಗಿರುತ್ತದೆ.

ಹೊರಗಿನ ಏಜೆನ್ಸಿ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಗೊತ್ತುಪಡಿಸಿಕೊಳ್ಳಲಾದ ಕಾರ್ಮಿಕರುಗಳು ತಮಗೆ ಸರಿಯಾದ ಸಮಯಕ್ಕೆ ಮಾಸಿಕ ವೇತನ ಪಾವತಿಸುತ್ತಿರುವುದಿಲ್ಲವೆಂದು, ಕಡಿಮೆ ವೇತನ ಪಾವತಿಸುತ್ತಿರುವುದಾಗಿಯೂ, ವೇತನ ಚೀಟಿ, ಗುರುತಿನ ಚೀಟಿ ನೀಡಿರುವುದಿಲ್ಲವೆಂದು, ಇ.ಪಿ.ಎಫ್ ಹಾಗೂ ಇ.ಎಸ್.ಐ ಅಕೌಂಟ್ ಸಂಖ್ಯೆ ನೀಡುತ್ತಿರುವುದಿಲ್ಲವೆಂದು ಹಾಗೂ ಇತರೆ ವಿಷಯಗಳ ಬಗ್ಗೆ ಕರ್ನಾಟಕ ರಾಜ್ಯ ವಿದ್ಯುತ್ ಫೆಡರೇಷನ್/ಎಐಯುಟಿಯುಸಿ ಮತ್ತು ಇತರೆ ಸಂಘಗಳಿಂದ ನಿಗಮ ಕಾರ್ಯಾಲಯಕ್ಕೆ, ಮಾನ್ಯ ಮುಖ್ಯ ಮಂತ್ರಿಯವರ ಕಚೇರಿಗೆ ಹಾಗೂ ಇಂಧನ ಇಲಾಖೆಗೆ ಹಲವಾರು ದೂರುಗಳನ್ನು ಸಲ್ಲಿಸುತ್ತಿರುತ್ತಾರೆ.

ಆದ್ದರಿಂದ, ಕವಿಪ್ರನಿನಿಯ ವ್ಯಾಪ್ತಿಯಲ್ಲಿನ ಎಲ್ಲಾ ವೃತ್ತ ಮಟ್ಟದಲ್ಲಿ ಹೊರಗುತ್ತಿಗೆ ಕಾರ್ಮಿಕರುಗಳ ದೂರುಗಳನ್ನು ಸ್ವೀಕರಿಸಿ ಚರ್ಚಿಸಿ ಇತ್ಯರ್ಥಪಡಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಲಾಗಿದೆ:

| | | |
|---|---|---|
| 1 | ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ(ಕಾ ಮತ್ತು ನಿ)ವೃತ್ತ, ಕವಿಪ್ರನಿನಿ | ಅಧ್ಯಕ್ಷರು |
| 2 | ಉಪಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ(ಕಾ ಮತ್ತು ನಿ)ವೃತ್ತ, ಕವಿಪ್ರನಿನಿ | ಸಂಚಾಲಕರು |
| 3 | ಸಂಬಂಧಿಸಿದ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್, ಟಿ.ಎಲ್ ಅಂಡ್ ಎಸ್.ಎಸ್. | ಸದಸ್ಯರು |
| 4 | ಸಂಬಂಧಿಸಿದ ವಿಭಾಗದ ಲೆಕ್ಕಾಧಿಕಾರಿ, ಟಿ.ಎಲ್ ಅಂಡ್ ಎಸ್.ಎಸ್ | ಸದಸ್ಯರು |
| 5 | ಸಹಾಯಕ ಲೆಕ್ಕಾಧಿಕಾರಿ(ಆಂ.ಪ), ಕವಿಪ್ರನಿನಿ | ಸದಸ್ಯರು |
| 6 | ಕಾರ್ಮಿಕ ಪ್ರತಿನಿಧಿಗಳು (ಒಂದು ವಿಭಾಗದಲ್ಲಿ ಇಬ್ಬರು ಮಾತ್ರ) | ಸದಸ್ಯರು |

ಈ ಮೇಲ್ಕಂಡ ಸಮಿತಿ ವೃತ್ತ ಮಟ್ಟದಲ್ಲಿ ಸ್ವೀಕೃತವಾದ ದೂರು ಅರ್ಜಿಗಳನ್ನು ಪ್ರತಿ ತಿಂಗಳು 11 ರಿಂದ 15ನೇ ತಾರೀಖಿನೊಳಗಾಗಿ ಸಂಬಂಧಿಸಿದ ಗುತ್ತಿಗೆದಾರರು ಮತ್ತು ಕಾರ್ಮಿಕರ ಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ ನಿಗಮದ ನಿಯಮಾನುಸಾರ ಇತ್ಯರ್ಥಪಡಿಸಲು ಸೂಕ್ತ ಕ್ರಮ ವಹಿಸುವುದು.

ಕವಿಪ್ರನಿನಿ ವ್ಯಾಪ್ತಿಯಲ್ಲಿ ಹೊರಗುತ್ತಿಗೆ ಸೇವೆಗಳನ್ನು ಒದಗಿಸಲಾದ ಹೊರಗಿನ ಏಜೆನ್ಸಿಯವರ ಮಾಸಿಕ ಬಿಲ್‌ಗಳನ್ನು ಅಂಗೀಕರಿಸುವಾಗ ಈ ಕೆಳಕಂಡ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

1. *ಗುತ್ತಿಗೆದಾರರು ಹೊರಗುತ್ತಿಗೆ ಕೆಲಸಗಾರರಿಗೆ ಪ್ರತಿ ತಿಂಗಳು 7ನೇ ತಾರೀಖಿನೊಳಗಾಗಿ ನಿಗದಿಪಡಿಸಿರುವ ಸಂಭಾವನೆಯನ್ನು ಅವರುಗಳ ಬ್ಯಾಂಕ್ ಖಾತೆಗೆ ಕಡ್ಡಾಯವಾಗಿ ಜಮಾ ಮಾಡಿರಬೇಕು.*
2. *ಹೊರಗುತ್ತಿಗೆ ಕೆಲಸಗಾರರಿಗೆ ಸಂಬಂಧಿಸಿದಂತೆ ಇ.ಪಿ.ಎಫ್ ಮತ್ತು ಇ.ಎಸ್.ಐ ವಂತಿಗೆಯನ್ನು ನಿಗದಿತ ಅವಧಿಯೊಳಗೆ ಸಂಬಂಧಪಟ್ಟ ಇಲಾಖೆಗಳಿಗೆ ಪಾವತಿಸಿರಬೇಕು ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಆಯಾ ತಿಂಗಳಿನ ಬಿಲ್‌ನೊಂದಿಗೆ ಲಗತ್ತಿಸಿ ಸಲ್ಲಿಸಬೇಕು.*
3. *ಹೊರಗುತ್ತಿಗೆ ಕೆಲಸಗಾರರ ಇ.ಪಿ.ಎಫ್ ಮತ್ತು ಇ.ಎಸ್.ಐ ಸಂಖ್ಯೆಯನ್ನು ಕಡ್ಡಾಯವಾಗಿ ಅಯಾ ಕಚೇರಿ/ವಿದ್ಯುತ್ ಕೇಂದ್ರದ ನೋಟಿಸ್ ಬೋರ್ಡ್‌ನಲ್ಲಿ ಪ್ರದರ್ಶಿಸಿರಬೇಕು.*
4. *ಹೊರಗುತ್ತಿಗೆ ಕೆಲಸಗಾರರಿಗೆ ಏಜೆನ್ಸಿ ರವರು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ವಿತರಿಸಿರಬೇಕು ಹಾಗೂ ಹೊರಗುತ್ತಿಗೆ ಕೆಲಸಗಾರರು ಅದನ್ನು ಧರಿಸಿರಬೇಕು.*
5. *ಪ್ರತಿ ತಿಂಗಳು ಹೊರಗುತ್ತಿಗೆ ಕೆಲಸಗಾರರಿಗೆ ಏಜೆನ್ಸಿ ರವರು ವೇತನ ಚೀಟಿಯನ್ನು ಕಡ್ಡಾಯವಾಗಿ ನೀಡಬೇಕು.*

ಮೇಲ್ಕಂಡ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿರುವ ಬಗ್ಗೆ ಸಂಬಂಧಪಟ್ಟ ನೋಡಲ್ ಅಧಿಕಾರಿ ಪರಿಶೀಲಿಸಿ ಹೊರಗಿನ ಏಜೆನ್ಸಿ ರವರ ಬಿಲ್‌ನಲ್ಲಿ ದೃಢೀಕರಣ ನೀಡಿದ ನಂತರವೇ ಬಿಲ್‌ಗಳನ್ನು ಅಂಗೀಕರಿಸಲು ಸೂಕ್ತ ಕ್ರಮವಹಿಸುವುದು.

ಈ ಮೇಲಿನ ನಿಯಮಗಳನ್ನು ಪಾಲಿಸದ ಗುತ್ತಿಗೆದಾರರ ಗುತ್ತಿಗೆಯನ್ನು ರದ್ದುಪಡಿಸಿ, ಸದರಿ ಗುತ್ತಿಗೆದಾರರಿಗೆ ಇನ್ನು ಮುಂದೆ ಹೊರಗುತ್ತಿಗೆ ಸೇವೆಗೆ ಸಂಬಂಧಿಸಿದಂತೆ ಯಾವುದೇ ಆದೇಶ ನೀಡದಂತೆ ಹಾಗೂ ಕಪ್ಪು ಪಟ್ಟಿಗೆ ಸೇರಿಸಲು ಸೂಕ್ತ ಕ್ರಮವಹಿಸಲು ಸೂಚಿಸಲಾಗಿದೆ.

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),
ಕವಿಪ್ರನಿನಿ

**ಪ್ರತಿಯನ್ನು ಮಾಹಿತಿಗಾಗಿ:**

1. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ.
4. ಅಧ್ಯಕ್ಷರು, ಕರ್ನಾಟಕ ರಾಜ್ಯ ವಿದ್ಯುತ್ ಫೆಡರೇಷನ್, ಸೂರಿ ಭವನ, ನಂ.40/5, 2ನೇ 'ಬಿ' ಮುಖ್ಯ ರಸ್ತೆ, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com/eprasarana ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ**

1. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ (ಕಾ ಮತ್ತು ನಿ)ವೃತ್ತ, ಕವಿಪ್ರನಿನಿ.
2. ಎಲ್ಲಾ ಉಪಲೆಕ್ಕನಿಯಂತ್ರಣಾಧಿಕಾರಿ, ಪ್ರಸರಣ (ಕಾ ಮತ್ತು ನಿ)ವೃತ್ತ/ಆಂತರಿಕ ಪರಿಶೋಧನೆ, ಕವಿಪ್ರನಿನಿ.
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಲೆಕ್ಕಾಧಿಕಾರಿ, ಕವಿಪ್ರನಿನಿ

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

1. ಶ್ರೀ.ರಾಮಕೃಷ್ಣಯ್ಯ.ಟಿ.ಆರ್, ಅಧ್ಯಕ್ಷರು ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು ಎಲ್ಲಾ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಇಂಜಿನಿಯರ್‌ಗಳ ಸಂಘ, ಬೆಂಗಳೂರು.

-3-

5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.